ಪೂರ್ಣಾನಂದ ಅಪ್ಪನಿಗಿಂತ ಚೂಟಿ. ಅವನಿಗೆ ಬೇಸರಿಸಬಾರದೆಂದು, ''ಇದೆಂಥ ದೂರ? ನಾನು, ನಿಮ್ಮಪ್ಪ ಹೈಸ್ಕೂಲ್ಗೆ ಈ ದಾರೀಲಿ ಐದೈದು ಮೈಲಿ ನಡ್ಕೊಂಡು ಹೋಗುತ್ತಿದ್ದು'' ಅಂತ ನಗಾಡಲು ಯತ್ನಿಸಿದೆ. ಅವನು, ''ಹೌದೌದು. ಅಪ್ಪ ಹೇಳ್ತಿರ್ತಾರೆ'' ಅಂತ ತಾನೂ ನಗುತ್ತ ಹೊರಟ.

ನಾವು ಸಾಗುತ್ತಿದ್ದ ಪಕ್ಕದ ಬದಿಯಲ್ಲಿ ಎಕರೆಗಟ್ಟಲೆ ಬೆಳೆದ ಸೇವಂತಿಗೆ ಹೂ ಫಸಲು. ಒಪ್ಪ ಓರಣವೊಡ್ಡಿ ಕಟ್ಟಿ ನಿಲ್ಲಿಸಿದಂತೆ ಪಾಸಲೆಯ ತುಂಬ ಹಳದಿ–ಹಸಿರು ಹಾಸಿದಂತೆ ತೊನೆದಾಡುತ್ತಿತ್ತು. ಈ ತೊನೆದಾಟದ ನಡುವೆ ನವಿಲುಗಳ ವಿಹಾರ. ನಾನು ಗಕ್ಕನೆ ನಿಂತು, ''ಇದೇನು ಪೂರ್ಣ ಹೂವಿನ ತೋಟದಲ್ಲಿ ನವಿಲುಗಳ ನರ್ತನ'' ಅಂತ ಹುಬ್ಬೇರಿಸಿದೆ. ಅವನು, ''ಇದು ನಮ್ಗೆ ಕಾಮನ್ ಅಂಕಲ್. ಅವು ಹಾವು, ಎಲೆಲಿರೊ ಹುಳುಗಳ ಹುಡುಕಾಡ್ತ ಅವೆ'' ಅಂದ. ಅಷ್ಟರಲ್ಲಿ ಹಿಂದುಗಡೆಯಿಂದ, ''ಅಂಕಲ್, ಶಿವರಾಜ್ ಅಂಕಲ್'' ಎಂಬ ಧ್ವನಿ ಬಂತು. ಗಕ್ಕನೆ ತಿರುಗಿದೆ. ಹುಡುಗಿ!!

''ನಿನಗೂ ಅಂಕಲ್, ಇವಳಿಗೂ ಅಂಕಲ್! ಕೇಳಕ್ಕೆ ಒಂಥರ ಹಿತ ಅನಿಸುತ್ತೆ. ಸಿಟಿ ಹುಡುಗ್ರು ಕರೆದಾಗ ಹಿಂಗೆ ಅನಿಸಲ್ಲ'' ಅನ್ನುತ್ತ ಹುಡುಗಿ ಕಡೆ ನೋಡಿದೆ. ತಟ್ಟನೆ ಅವಳು ಯಾರನ್ನೊ ಹೋಲುವಂತೆ ಕಂಡಳು. ಅವಳು ಪೂರ್ಣಾನಂದನ ಕುರಿತು, ''ಇವ್ರೆ ಅಲ್ವಾ ಶಿವರಾಜ್ ಅಂಕಲ್. ಬೆಂಗಳೂರ್ನಲ್ಲಿ ಇರೋರು. ನಿಮ್ಮಪ್ಪನ ಸ್ನೇಹಿತ್ರು'' ಅಂದಳು. ಅವನು, ''ಹೂ, ಆಗಾಗ ನಮ್ಮಪ್ಪನ್ಗೆ ಕೇಳ್ತಿದ್ದಲ್ಲ ಅವ್ರೆ ಇವ್ರು!'' ಅಂತ ಭಾವ ತುಂಬಿ ಹೇಳಿದ. ನಾನು ಹುಡುಗಿಯ ಕರೆಯ ಆಪ್ತತೆಯನ್ನು ಆಸ್ವಾದಿಸುತ್ತಿದ್ದೆ. ಪೂರ್ಣಾನಂದ, ''ಅಂಕಲ್ ಸಂಜೆ ಆಗಿಬಿಡುತ್ತೆ ನಡೆಯಿರಿ'' ಅಂದವನು ಅವಳಿಗೆ, ''ನೀನೂ ಬಾ ಎಳನೀರು ಕುಡಿವಂತೆ'' ಅಂದು ತೆಂಗಿನ ತೋಟದ ಕಡೆಗೆ ಮುಖ ಮಾಡಿದ.

ನಾನು ಈ ಇಬ್ಬರ ನಡುವೆ ಮಗುವಿನಂತೆ ಕಿರುಬದುವಿನ ಮೇಲೆ ಹೆಜ್ಜೆ ಊರತೊಡಗಿದೆ. ಈಗ ಮಾತನಾಡುವುದು ತನ್ನ ಸರದಿ ಎಂಬಂತೆ ಅವಳು ಬದುವಿನ ಕೆಳಗಿಳಿದು ನನ್ನ ಬದಿಯಲ್ಲಿ ಹೆಜ್ಜೆ ಹಾಕುತ್ತಾ, ''ನಿಮ್ಮುನ್ನ ಭಾರಿ ಕೇಳಿದ್ದೆ ಅಂಕಲ್. ನಂತಾಯಿ ಆಗಾಗ ನಿಂಬಗ್ಗೆ ಹೇಳ್ತಿದ್ದಳು. ಆನಂದರಾಜಪ್ಪನೂ, 'ಹೈಸ್ಕೂಲು, ಪಿಯುಸಿಗಂಟ ಒಟ್ಗೇ ಓದಿದ ಜ್ವತೆಗಾರ. ಅವನೀಗ ಬೆಂಗಳೂರಿನಲ್ಲಿ ದೊಡ್ಡ ಕೆಲಸ್ದಲ್ಲಿದ್ದಾನೆ' ಅಂತ ಹೇಳಿದ್ರು. ಶಾಲೆಗೆ ರಜೆ ಬಂದ್ರೆ ಅವರೂರಲ್ಲೋ ಇಲ್ಲ ನಿಮ್ಮೂರಲ್ಲೊ ಒಟ್ಗೇ ಇದ್ದುಬಿಡುತ್ತಿದ್ರಂತಲ್ಲ. ಆಗಿನಿಂದ್ಲೂ ನಿಮ್ಮುನ್ನ ನೋಡ್‌ಬೇಕು ಅಂದ್ಕೊಂಡಿದ್ದೆ. ಈಟು ವರ್ಷಕ್ಕೆ ಇವತ್ತು ಕೂಡಿ ಬಂತು ನೋಡಿ'' ಎಂದು ಕ್ಷಣ ನಿಂತು ನೋಡಿದಳು.

ನಾನೂ ಅವಳಷ್ಟೇ ಆಪ್ತವಾಗಿ ನೋಡಿದೆ. ಎಷ್ಟೋ ವರ್ಷಗಳ ಮೇಲೆ ಇಲ್ಲಿ ಮತ್ತೆ ದೊರಕಿದ ಮಮತೆ, ಅಂತಃಕರಣದ ಹಿತಾನುಭವ! ಅದೇ ಸಲುಗೆಯಿಂದ, ''ಅದ್ಸರಿ, ನೀನಾರು ಅಂತ ಮೊದ್ಲು ಹೇಳಮ್ಮ. ಆಮೇಲೆ ಅವರಿಬ್ರು ಬಿಟ್ಟಿರೊ ಕಥೇನ ನಾನು ಮುಂದುವರಿಸ್ತೀನಿ'' ಅಂತ ನಕ್ಕೆ.

ಅವಳು, ''ಅಯ್ಯೋ ನಾನೊಂದು! ಅಂಜಲಿ ಅಂತ. ಅದೇ ಗೌರಮ್ಮನ ಮಗಳು'' ಅಂದಳು. ಯಾರದೊ ಹೋಲಿಕೆ ಅಂದುಕೊಂಡಿದ್ದ ಭಾವಕ್ಕೆ ಈಗ ತಟ್ಟನೆ ಆ ಗೌರಿ ಈ ಹುಡುಗಿ ಮೂಲಕ ನಿಚ್ಚಳವಾಗಿಬಿಟ್ಟಳು. ''ನಮ್ಮೂರ ಗೌರಿ'' ದಡಕ್ಕನೆ ಉದ್ಗರಿಸಿದೆ. ಅವಳು ಬಿದ್ದಿದ್ದ ಕಡ್ಡಿಯನ್ನು ಎತ್ತಿಕೊಂಡು ಊರುಗೋಲಾಗಿಸಿ, ಉಕ್ಕೆ ತೆರೆ ಮೇಲೆ ಪಾದವೂರುತ್ತಾ ಕತ್ತು ಕುಣಿಸಿಕೊಂಡು, ''ಅದೇ ನಿಮ್ಜೊತೆ ಮಿಡ್ಲಿಸ್ಕೂಲ್‌ಗಂಟ ಓದಿದ್ದಳಲ್ಲ ಆ ಗೌರಿ! ಇಸ್ಕೂಲು ಬಿಟ್ರೆ ಸಾಕು ಸ್ಲೇಟು–ಪುಸ್ತಕದ ಚೀಲ ಒಗೆದು ಹೊರಟುಬಿಡುವಿರಂತೆ. ನಿಂಜೊತೆಗೇ ಆಡೋಳಂತೆ ಒಳ್ಳೆ ಗಂಡುಬೀರಿ ಥರ...'' ಹೇಳುತ್ತಾ ಪಟಪಟನೆ ನಗತೊಡಗಿದಳು. ಮರೆಗೊಂಡಿದ್ದ ಮಾಸಿದ ಪುಟಗಳನ್ನು ಮೊಗಚುತ್ತಿದ್ದ ಈ ಚಿನಕುರುಳಿಯ ಉತ್ತೇಜಿಸಿ, ''ನೀನು ಗೌರಿ ಮಗಳಾ? ತಾಯಿ ಥರನೇ'' ಎಂದೆ. ನನ್ನ ದೀರ್ಘ ಸ್ವರವೇ ಸಮಸ್ತವನ್ನು ಸಾರುವಂತಿತ್ತು.

ಅಂಜಲಿ ಕಡ್ಡಿಯಿಂದ ಉಕ್ಕೆತೆರೆಯ ಮಣ್ಣು ಮೀಟುತ್ತಾ, ''ಇಸ್ಕೂಲಲ್ಲಿ ಅವಳದೇ ನಡೀಬೇಕು